ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನೀಯರರು(ವಿ),
ಕಾ ಮತ್ತು ಪಾ ವೃತ್ತ, ಹುವಿಸಕಂನಿ.
ನೆಹರು ನಗರ, ಬೆಳಗಾವಿ-590 010.
ದೂರವಾಣಿ ಸಂಖ್ಯೆ: (0831) 2470351
ಫ್ಯಾಕ್ಸ ಸಂಖ್ಯೆ: (0831) 2472493

HUBLI ELECTRICITY SUPPLY COMPANY LIMITED
(Wholly Owned Govt of Karnataka Undertaking)
Superintending Engineer Ele.,
O&M Circle, HESCOM.,
Nehru Nagar, Belagavi-590010.
Website: www.hescom.co.in
E-Mail ID: seebgm.hescom@gmail.com

CORPORATE IDENTITY NUMBER(CIN): U31401KA2002SGC030437

ಕ್ರ.ಸಂ:ಬೆ/ಅಅ(ವಿ)/ಉಲೆನಿ/ಸಲೆ/2021-22/ 5565-70 ದಿನಾಂಕ: 3 JAN 2022

**ಗ್ರಾಹಕರ ಕುಂದು ಕೊರತೆಗಳ ನಿವಾರಣೆ ವೇದಿಕೆ**
**ಕಾರ್ಯ & ಪಾಲನೆ ವೃತ್ತ ಹುವಿಸಕಂನಿ, ಬೆಳಗಾವಿ, ಬೆಳಗಾವಿ ಜಿಲ್ಲೆ.**

ಪ್ರಕರಣ ಸಂಖ್ಯೆ: 22/2021

ವೇದಿಕೆಯ ಸದಸ್ಯರು:
01 ಶ್ರೀ ಗಿರಿಧರ ಕುಲಕರ್ಣಿ , ಬೆಳಗಾವಿ ಜಿಲ್ಲೆ ಗ್ರಾ..ಕು.ಕೊ.ನಿ ವೇದಿಕೆ ಹಾಗೂ ಅಧೀಕ್ಷಕ ಇಂಜಿನೀಯರ(ವಿ), ಕಾರ್ಯ & ಪಾಲನೆ ವೃತ್ತ ಹುವಿಸಕಂನಿ, ಬೆಳಗಾವಿ
02 ಶ್ರೀ ಶರೀಫುದೀನ್ ಅಹ್ಮದ, ಉಪಲೆಕ್ಕ ನಿಯಂತ್ರಣಾಧಿಕಾರಿ ಕಾರ್ಯ & ಪಾಲನೆ ವೃತ್ತ ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಸದಸ್ಯರು.
03 ಶ್ರೀ ಚಂದ್ರಕಾಂತ ಟಿ ಮಜಗಿ , ವಕೀಲರು, ಸದಸ್ಯರು

ಶ್ರೀಮತಿ ತಾರಾಬಾಯಿ ಬಾಬುರಾವ ನಿಂಬಾಳಕರ
ಸಾ\\ ಬಸ್,ಸ್ಟ್ಯಾಂಡ ದರ್ಗಾದ ಹತ್ತಿರ ರಾಯಬಾಗ
ತಾ\\ ರಾಯಬಾಗ ಜಿ\\ ಬೆಳಗಾವಿ
ಸ್ಥಾವರ ಸಂಖ್ಯೆ: RBG-3034 ------------------ ದೂರುದಾರರು

ವಿರುದ್ಧ

ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್(ವಿ)
ಕಾರ್ಯ & ಪಾಲನೆ ಉಪವಿಭಾಗ ಹುವಿ'ಸಕಂನಿ
ರಾಯಬಾಗ ---------------- ಪ್ರತಿವಾದಿ

1. ಶ್ರೀಮತಿ ತಾರಾಬಾಯಿ ಬಾಬುರಾವ ನಿಂಬಾಳಕರ ದರ್ಗಾದ ಹತ್ತಿರ ರಾಯಬಾಗ ಇವರು ಕೆ.ಇ ಆರ್.ಸಿ (ಗ್ರಾಹಕರ ಕುಂದುಕೊರತೆ ನಿವಾರಣೆ ವೇದಿಕೆ & ಒಂಬಡ್ಸಮನ್ ) ನಿಬಂದನೆಗಳು 2004 ರ ಅಡಿಯಲ್ಲಿ ಒದಗಿಸಿದ ಅವಕಾಶಗಳ ಅಡಿಯಲ್ಲಿ ತಮ್ಮ ದೂರನ್ನು ವೇದಿಕೆಗೆ ಸಲ್ಲಿಸಿರುವರು.

2. <u>ಪ್ರಕರಣದ ಸಾರಾಂಶ</u>

i) <u>ದೂರುದಾರರು ಈ ವೇದಿಕೆಗೆ ದಿನಾಂಕ : 16.07.2021 ರಂದು ತಮ್ಮ ಆರ್.ಆರ್ ಸಂಖ್ಯೆ:</u> RBG-3034 ಗೆ 14 ತಿಂಗಳ ಬಿಲ್ಲು ಅಂದರೆ ಫೆಬ್ರುವರಿ:2020 ರಂದ ಮೇ-2021 ರ ವರೆಗೆ ಡಿ.ಎಲ್ ಎಂದು ರೂ : 1216/- ಬಿಲ್ಲನ್ನು ನೀಡಿರುತ್ತಾರೆ ಎಂದು ಸದರಿ ದೂರದಾರರು ವಿಷಯವನ್ನು ಇತ್ಯರ್ಥ ಪಡಿಸುವಂತೆ ವೇದಿಕೆಗೆ ದೂರನ್ನು ದಾಖಲಿಸಿರುತ್ತಾರೆ.

ii) ಸದರಿ ದೂರ ಕುರಿತು ಈ ಕಛೇರಿಯಲ್ಲಿ ದಿನಾಂಕ: 11.10.2021 ರಂದು ಸಮಯ : 03:00 ಅಪರಾಹ್ನ ಮತ್ತು ದಿನಾಂಕ: 11.11.2021 ಸಮಯ : 03:00 ಅಪರಾಹ್ನ ವಿಚಾರಣೆಯನ್ನು ದೂರುದಾರರು ಮತ್ತು ಪ್ರತಿವಾದಿಗಳ ಜೊತೆಗೆ ಹಾಜರಿದ್ದು ವಿಚಾರಣೆ ನಡೆಸಲಾಯಿತು.

**3) ದೂರುದಾರರು ಸಲ್ಲಿಸಿರುವ ಹೇಳಿಕೆ ವಿವರ**

ಆರ್ ಆರ್ ಸಂಖ್ಯೆ: RBG-3034 ಗೆ ಮಾಪಕ ಬದಲಾಯಿಸಿದ್ದರಿಂದ ಫೇಬ್ರುವರಿ –2020 ರಿಂದ ಮೇ–2021 ರವರೆಗೆ ಅಂದರೆ 14 ತಿಂಗಳ ಒಟ್ಟು ಬಿಲ್ಲು ರೂ.1216/– ಮೇ–2021 ನೇ ತಿಂಗಳಲ್ಲಿ ರೀಡಿಂಗ್ ತಗೆದುಕೊಂಡು ಬಿಲ್ಲನ್ನು ನೀಡಿರುತ್ತಾರೆ, ಆದರೆ ಪ್ರತಿ ತಿಂಗಳು ಬಿಲ್ಲನ್ನು ನೀಡುತ್ತಾ ಇದಿದ್ದರೆ ಅದೇ ವೇಳೆಗೆ ಆಗ ಇದ್ದ ಬಾಡಿಗೆದಾರರು ಪಾವತಿಸುತ್ತಿದ್ದರು , ಆದರೆ ಈಗ ಒಟ್ಟು 14 ತಿಂಗಳ ಬಿಲ್ಲನ್ನು ರೂ.1216/– ನೀಡಿರುತ್ತಾರೆ ಈಗಾಲೇ ಬಾಡಿಗೆದಾರರು ಮನೆಯನ್ನು ಖಾಲಿ ಮಾಡಿ ಬಿಟ್ಟು ಹೋಗಿರುತ್ತಾರೆ ಆದುದ್ದರಿಂದ ಈಗ ನೀಡಿದ ಬಿಲ್ಲು ರೂ. 1216/– ನ್ನು ಯಾರು ತುಂಬುತ್ತಾರೆ ಎಂದು ದೂರುದಾರರು ಹೇಳಿಕೆ ನೀಡಿರುತ್ತಾರೆ.

**4) ಪ್ರತಿವಾದಿ ಸಲ್ಲಿಸಿರುವ ಹೇಳಿಕೆಯ ವಿವರ:**

ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್(ವಿ) ಉಪವಿಭಾಗ ರಾಯಬಾಗರವರುಸ್ಥಾವರ ಸಂಖ್ಯೆ: RBG-3034 ಗಣಕಯಂತ್ರದಲ್ಲಿ ಪರಿಶಿಲಿಸಿದಾಗ ಫೇಬ್ರುವರಿ–2020 ರಿಂದ ಮೇ–2021 ರ ವರೆಗೆ ಡಿ.ಎಲ್ ಎಂದು ಬಿಲ್ಲು ನೀಡಲಾಗಿರುತ್ತದೆ ಹಾಗೂ ಎಪ್ರೀಲ್–2021 ರಂದು ಮಾಪಕ ಬದಲಾವಣೆ ಗಣಕಯಂತ್ರದಲ್ಲಿ (R & R) ಮಾಡಲಾಗಿರುತ್ತದೆ. ಹಾಗೂ ಅದೇ ತಿಂಗಳು ಸುಮಾರು 387 ಯುನಿಟಗಳು ಬಿಲ್ಲು ನೀಡಲಾಗಿದ್ದು ಸದರಿ ಬಿಲ್ಲಿನಲ್ಲಿ ಡಿ.ಎಲ್ ಸರಾಸರಿ ಆಕರಣೆ ಹಿಂಪಡೆಯಲಾಗಿದ್ದು, ಸುಮಾರು 218 ಯುನಿಟಗಳ ಹಿಂಪಡೆದು ಗ್ರಾಹಕರಿಗೆ (KERC) ನಿಯಮಾನುಸಾರ ಬಿಲ್ಲು ನೀಡಲಾಗಿದೆ, ಈ ವಿಷಯವನ್ನು ಗ್ರಾಹಕರಿಗೆ ತಿಳಿ ಹೇಳಿದರೂ ಕೂಡಾ ಗ್ರಾಹಕರು ನಮ್ಮ ಸ್ಥಾವರದ ಮಾಪಕವು ಮಾರ್ಚ–2020 ರಂದು ಬದಲಾವಣೆ ಆಗಿರುತ್ತದೆ, ಎಂದು ತಿಳಿಸಿರುತ್ತಾರೆ.

ಸದರಿ ವಿಷಯವನ್ನು ಶಾಖಾಧಿಕಾರಿಯೊಂದಿಗೆ ಚರ್ಚಿಸಿದಾಗ ಮಾಪಕವನ್ನು ರಾಜಶ್ರೀ ಇಲೆಕ್ಟ್ರೀಕಲ್ ಎಜೆನ್ಸಿಯವರ ಮಾಪಕ ಬದಲಾವಣೆ ಮಾಡಿರುತ್ತಾರೆ, ಎಂದು ಶಾಖಾಧಿಕಾರಿಗಳು ತಿಳಿಸಿರುತ್ತಾರೆ, ಹಾಗೂ ಕೋವಿಡ್–19 ಇರುವ ಕಾರಣದಿಂದ ಮಾರ್ಚ–2020 ರಿಂದ ಸುಮಾರು 4–5 ತಿಂಗಳಗಳು ಲಾಕಡೌನ ಇರುವುದರಿಂದ ಮಾಪಕ ಬದಲಾವಣೆ ಮಾಡಿರುವ ಬಗ್ಗೆ ಕಂದಾಯ ವಿಭಾಗಕ್ಕೆ ಆರ್ & ಆರ್, ವಿಳಂಬವಾಗಿ ನೀಡಿರುತ್ತಾರೆ. ಆದಕಾರಣ ಸದರಿ ಸಂದರ್ಭಗಳಲ್ಲಿ ಡಿ.ಎಲ್ ಸರಾಸರಿ ಆಕರಣೆ ಬಿಲ್ಲನ್ನು ನೀಡಲಾಗಿರುತ್ತದೆ, ಹಾಗೂ ಎಪ್ರೀಲ್–2021 ರಂದು ಗುತ್ತಿಗೆದಾರರು ಮಾಪಕ ಬದಲಾವಣೆ ಮಾಡಿರುವ ಬಗ್ಗೆ (R & R) ನೀಡಿರುತ್ತಾರೆ, ಸದರಿ ತಿಂಗಳಿಂದ ಗಣಕ ಯಂತ್ರದಲ್ಲಿ ದಾಖಲೆ ಮಾಡಿ, ಮಾಪಕ ಓದುಗರಿಂದ ಬಿಲ್ಲ ನೀಡಲಾಗಿರುತ್ತದೆ, ಸದರಿ ಬಿಲ್ಲಿನಲ್ಲಿ ಜಕಾತಿ ಪುಸ್ತಕದ ಅನುಸಾರ ಯಾವುದೇ ವ್ಯತ್ಯಾಸ ಇರುವುದಿಲ್ಲ. ಮತ್ತು ಸದರಿ ಗ್ರಾಹಕರಿಗೆ ನೀಡಿರುವ ಬಿಲ್ಲ ರೂ.1216/– ಕ್ರಮಬದ್ಧವಾಗಿರುತ್ತದೆ.ಎಂದು ತಿಳಿಸಿರುತ್ತಾರೆ.

ಮುಂದುವರೆದು ಸದರಿ ಗ್ರಾಹಕರು ಮೇಲೆ ತಿಳಿಸಿರುವ ಅಂಶಗಳನ್ನು ಗಮನಿಸಿ ಈಗ ಸದರಿಯವರಿಗೆ ನೀಡಿರುವ ಬಿಲ್ಲು ಕ್ರಮಬದ್ಧವಾಗಿರುತ್ತದೆ ಎಂದು ಮನವರಿಕೆ ಆಗಿರುತ್ತದೆ ಆದುದರಿಂದ ಸದರೀ ಗ್ರಾಹಕರು ರಶೀದಿ ಸಂಖ್ಯೆ:20210005600 ದಿನಾಂಕ: 04.10.2021 ರಂದು ರೂ.1300/– ನ್ನು ಪಾವತಿಸಿರುತ್ತಾರೆ.

**5) ವೇದಿಕೆಯು ಗಮನಿಸಿರುವ ಅಂಶಗಳು:**

ಗ್ರಾಹಕರು ನೀಡಿದ ದೂರುಗಳಿಗೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರರು(ವಿ) ನೀಡಿದ ನಿಕರವಾದ ವಿಷಯ ಮತ್ತು ಅಂಕಿ ಅಂಶಗಳನ್ನು ದೂರುದಾರರು ಗಮನಿಸಿ ಮನವರಿಕೆ ಮಾಡಿಕೊಂಡು ಖುದ್ದಾಗಿ ಬಿಲ್ಲಿನ ಮೊತ್ತ ರೂ.1216/– ನ್ನು ರಶೀದಿ ಸಂಖ್ಯೆ: 20210005600 ದಿನಾಂಕ: 04.10.2021 ರಂದು ರೂ. 1300/– ನ್ನು ಪಾವತಿಸಲಾಗಿದ್ದನ್ನು ಗಮನಿಸಿ ಈ ವೇದಿಕೆಯು ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2021-22:** 5565-70

3 JAN 2022

ಮೇಲಿನ ಅಂಶಗಳನ್ನು ಅವಲೋಕಿಸಲಾಗಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ(ವಿ) ಕಾರ್ಯ & ಪಾಲನೆ ಉಪ-ವಿಭಾಗ ಹುವಿಸಕಂನಿ ರಾಯಭಾಗ ರವರು ಶ್ರೀಮತಿ ತಾರಾಬಾಯಿ ಬಾಬುರಾವ ನಿಂಬಾಳಕರ ರಾಯಭಾಗ ರವರ ಸ್ಥಾವರ ಸಂಖ್ಯೆ: RBG-3034 ಕ್ಕೆ ಫೆಬ್ರುವರಿ-2020 ರಿಂದ ಮೇ-2021 ರವರೆಗೆ ನೀಡಿರುವ ವಿದ್ಯುಚ್ಛಕ್ತಿ ಬಿಲ್ಲು ರೂ.1216/- ಕ್ರಮಬದ್ಧವಾಗಿದ್ದು ಮತ್ತು ಸದರಿ ಗ್ರಾಹಕರಿಗೆ ಮನವರಿಗೆಯಾಗಿ ಬಿಲ್ಲಿನ ಮೊತ್ತ ರೂ 1216/- ನ್ನು ರಶೀದಿ ಸಂಖ್ಯೆ: 20210005600 ದಿನಾಂಕ: 04.10.2021 ರಂದು ಪಾವತಿಸಿರುವುದರಿಂದ ಈ ಪ್ರಕರಣವು ಇತ್ಯರ್ಥಗೊಳಿಸಿ ಆದೇಶಿಸಲಾಗಿದೆ.

28/12/21

( ಶರೀಫುದ್ದಿನ ಅಹ್ಮದ)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾ.ಕು.ಕೊ.ನಿ.ವೇ.ಸದಸ್ಯರು
ಕಾ & ಪಾ ವೃತ್ತ ಬೆಳಗಾವಿ

(ಚಂದ್ರಕಾಮತ ಟಿ ಮಜಗಿ)
ಆಯೋಗದಿಂದ ನಿಯೋಜಿಸಲಾದ
ಸದಸ್ಯರು

(ನಿಂಧರ ಕುಲಕರ್ಣಿ)
ಅಧ್ಯಕ್ಷರು , ಬೆಳಗಾವಿ ಜಿಲ್ಲೆ,
ಗ್ರಾ.ಕುಂ.ಕೊ.ನಿ.ವೇದಿಕೆ ಹಾಗೂ
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವೃತ್ತ ಹೆಸ್ಕಾಂ ಬೆಳಗಾವಿ

ಗೆ,
ಶ್ರೀಮತಿ. ತಾರಾಬಾಯಿ ಬಾಬುರಾವ ನಿಂಬಾಳಕರ,
ಸಾ\\ ಬಸ್,ಸ್ಟ್ಯಾಂಡ ದರ್ಗಾದ ಹತ್ತಿರ ರಾಯಬಾಗ
ತಾ\\ ರಾಯಬಾಗ ಜಿ\\ ಬೆಳಗಾವಿ

ಪ್ರತಿ:

1. ಮುಖ್ಯ ಇಂಜಿನೀಯರ(ವಿ), ಬೆಳಗಾವಿ ವಲಯ, ಹುವಿಸಕಂನಿ., ಬೆಳಗಾವಿ
2. ಪ್ರಧಾನ ವ್ಯವಸ್ಥಾಪಕರು (ಆ & ಮಾಸಂಅ)/(ತಾಂತ್ರಿಕ). ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ.
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ವಿಭಾಗ, ಹುವಿಸಕಂನಿ., ರಾಯಭಾಗ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯ್(ವಿ), ಕಾ ಮತ್ತು ಪಾ ಉಪ ವಿಭಾಗ, ಹುವಿಸಕಂನಿ., ರಾಯಬಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ.